**ಓ.ಎಸ್ಃ 359/2012**
**ಡಿ.ಡಬ್ಲ್ಯೂಃ 02**
**ಅಮೀನಪ್ಪ ತೆಗ್ಗಿ**

**ದಿನಾಂಕಃ 16-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪ್ರತಿವಾದಿಯ (ಸಂಗಪ್ಪ ತಂಃತಿಪ್ಪಣ್ಣ ಜಿದ್ದಿಮನಿ) ರ ಪರ ಸಾಕ್ಷಿಯ ಮುಖ್ಯವಿಚಾರಣೆಃ**

ನಾನು ನನ್ನ ಮುಖ್ಯವಿಚಾರಣೆಯ ಪರವಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು ವಾದಿ ಪರ ಶ್ರೀ ಎನ್.ಎಸ್.ಎಂ. ವಕೀಲರಿಂದಃ**

**1.** ನಾನು 2ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಕನ್ನಡವನ್ನು ಓದಲು ಬರೆಯಲು ಬರುತ್ತದೆ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಇಂಗ್ಲೀಷನಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ.

2. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದು, ಈ ನ್ಯಾಯಾಲಯವು ಸೂಕ್ತ ಪ್ರಶ್ನೆಯನ್ನು ಕೇಳಲು ಆದೇಶ ಮಾಡಿ ಸದರಿ ಪ್ರಶ್ನೆಯನ್ನು ತಿರಸ್ಕರಿಸಲಾಗಿರುತ್ತದೆ.

3. ತಿಪ್ಪಣ್ಣ ಸಂಗಪ್ಪನವರ ತಂದೆ. ತಿಪ್ಪಣ್ಣನವರ ಸಹೋದರರು, ಶಿವಲಿಂಗಪ್ಪ ಮತ್ತು ಭೀಮಪ್ಪ. ದಾವಾ ಸ್ವತ್ತಿನ ಸ.ನಂಬರ 14. ಅದು 7 ಎಕರೆ 7 ಗುಂಟೆ ವಿಸ್ತೀರ್ಣ ಹೊಂದಿದೆ. ಸದರಿ ದಾವಾ ಸ್ವತ್ತಿನಲ್ಲಿ 5 ಎಕರೆ ಜಮೀನು ಗೋಪಾಲರವರ ಹೆಸರಿನಲ್ಲಿ ಮತ್ತು ಉಳಿದ 2 ಎಕರೆ 7 ಗುಂಟೆ ಜಮೀನು ಸಂಗಪ್ಪನವರ ಹೆಸರಿನಲ್ಲಿ ಈಗ ಇರುತ್ತದೆ.

**4.** ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏಕತ್ರ ಕುಟುಂಬ ಎಂದು ಬರೆಯಲಾಗಿದ್ದು, ಏಕತ್ರ ಕುಟುಂಬದಲ್ಲಿ ಯಾರು ಯಾರು ಇದ್ದರು ಎಂದರೆ ಬಂಗಾರೆವ್ವ, ಸಂಗಪ್ಪ ಮತ್ತು ತಿಪ್ಪಣ್ಣ ಇದ್ದರು. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಯಾವ ಜಮೀನನ್ನು ಮಾರಾಟ ಮಾಡಲಾಗಿದೆ ಎಂದು ಬರೆದಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಮಾರಿದ ಬಗ್ಗೆ ನಮೂದಿಸಿಲ್ಲ ಎಂದು ನುಡಿಯುತ್ತಾರೆ.

5. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಬರೆಯಲು ಜಮೀನು ಮಾಲೀಕರು ಮಾಹಿತಿಯನ್ನು ನೀಡಿರುತ್ತಾರೆ. ಗೋಪಾಲ ತನ್ನ ಹೆಸರಿಗೆ ಜಮೀನನ್ನು ಮಾಡಿಕೊಂಡ ಬಗ್ಗೆ ನನಗೆ 20 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ನನ್ನ ಪ್ರಮಾಣ ಪತ್ರದ ಮೂರನೇ ಖಂಡಿಕೆಯಲ್ಲಿ ನಮೂದಿಸಿದಂತೆ ಬ್ಯಾಂಕಿನ ವ್ಯವಹಾರ ಆಗುವಾಗ ನಾನು ಇರಲಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ನನಗೆ ಅವರೆಲ್ಲರೂ ವಿಷಯವನ್ನು ಹೇಳಿದರು ಅದಕ್ಕೆ ಗೊತ್ತಾಯಿತು.

6. ಗೋಪಾಲನ ಕಬ್ಜಾದಲ್ಲಿ 5 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ಸಂಗಪ್ಪನ ಕಬ್ಜಾದಲ್ಲಿ 2 ಎಕರೆ ಜಮೀನು ಇದೆ ಎಂದರೆ ಸಾಕ್ಷಿಯು ಒಟ್ಟು ದಾವಾ ಸ್ವತ್ತಿನಲ್ಲಿ ಸಂಗಪ್ಪನೇ ಕಬ್ಜಾದಲ್ಲಿದ್ದಾನೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನ ಪಹಣಿ ಪತ್ರಿಕೆಯನ್ನು ನೋಡಿಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಂಗಪ್ಪನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

(ತೇಜಸ್ವಿನಿ ಸೊಗಲದ)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು
ಬಸವನ ಬಾಗೇವಾಡಿ.